# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹ ಕಂದಾಯ ಅಧಿಕಾರಿ ರವರ ಕಛೇರಿ, ಹೇರೋಹಳ್ಳಿ ಉಪ-ವಲಯ,

ನಂ. 01 ಬಿ.ಇ.ಎಲ್ 1ನೇ ಹಂತ, ಭಾರತ್‌ನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು. 560091.

ಸಂಖ್ಯೆ: ಸ.ಕಂ.ಅ(ಹೇ)ಪಿಆರ್/97/2018-19. ದಿನಾಂಕ:22/02/2019.

40-ದೊಡ್ಡಬಿದರಕಲ್ಲು ವಾರ್ಡ್ ಸಮಿತಿಯ ದಿನಾಂಕ:22/02/2019ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ: | |
| ಶ್ರೀ.ಎಸ್.ವಾಸುದೇವ - ಅಧ್ಯಕ್ಷರು | ಕಾರ್ಯದರ್ಶಿ ಮತ್ತು ಸಂಚಾಲಕರು.<br>ಸಹ ಕಂದಾಯ ಅಧಿಕಾರಿ, ಹೇರೋಹಳ್ಳಿ ಉಪ ವಲಯ. |
| ಶ್ರೀ.ಕೂರ್ಲಪ್ಪ - ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇರೋಹಳ್ಳಿ |
| ಶ್ರೀ.ಪ್ರಕಾಶ್ ಟಿ.ಎನ್. - ಸದಸ್ಯರು | ಕಾರ್ಯಪಾಲಕ ಅಭಿಯಂತರರು, ವಿದ್ಯುತ್ |
| ಶ್ರೀಮತಿ.ಲಕ್ಷ್ಮೀದೇವಿ - ಸದಸ್ಯರು | ಆರಕ್ಷಕ ನಿರೀಕ್ಷಕರು, ಬ್ಯಾಡರಹಳ್ಳಿ ಪೊಲೀಸ್ ಠಾಣೆ |
| ಶ್ರೀಮತಿ.ಭಾಗ್ಯಮ್ಮ - ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು, |
| ಶ್ರೀಮತಿ.ಶೀಲಾ ಜಿ - ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು. |
| ಶ್ರೀ.ರಾಜಗೋಪಾಲ್ - ಸದಸ್ಯರು | ಸಂಬಂಧಪಟ್ಟ ಅಧಿಕಾರಿ ಮತ್ತು ನೌಕರರುಗಳು |
| ಶ್ರೀ.ಪ್ರಶಾಂತ್ - ಸದಸ್ಯರು | - |
| ಶ್ರೀ.ಸತೀಶ್ - ಸದಸ್ಯರು | - |
| ಶ್ರೀ.ಪ್ರಸಾದ್ ಕುಮಾರ್ - ಸದಸ್ಯರು | - |
| ಶ್ರೀ.ಶ್ರೀನಿವಾಸ್ - ಸದಸ್ಯರು | - |

01) ಬೀದಿ ದೀಪ ನಿರ್ವಹಣೆ:-

- ವಾರ್ಡ್‌ನಂ. 40-ದೊಡ್ಡಬಿದರಕಲ್ಲು ವ್ಯಾಪ್ತಿಯಲ್ಲಿ ಸುಮಾರು 360 ಪೋಲ್‌ಗಳನ್ನು ಹಾಕಿದ್ದು, 360 ಎಲ್.ಇ.ಡಿ. ಬಲ್ಬ್‌ಗಳನ್ನು ಅಳವಡಿಸಿ ಇದನ್ನು ಒಂದು ವರ್ಷದವರೆಗೆ ನಿರ್ವಹಿಸಲು ಸೂಚಿಸಿರುತ್ತದೆ ಆದರೆ ಎಲ್.ಇ.ಡಿ. ಬಲ್ಬ್‌ಗಳು ಬೇಗ ದುರಸ್ತಿಗೊಂಡಿದ್ದು ರಿಪೇರಿ ಮಾಡಲು ಸಾಧ್ಯವಿರುವುದಿಲ್ಲ, ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂಧ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರನ್ನು ಬದಲಾಯಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರು ಒಂದು ತಿಂಗಳೊಳಾಗಿ ಹೊಸ

ಯಾವುದೇ ರೀತಿ ತೊಂದರೆಯಾಗದಂತೆ ಮುಂದಿನ ಟೆಂಡರ್‌ವರೆಗೆ ಕಾರ್ಯನಿರ್ವಹಿಸಲು ತಿಳಿಸಿರುತ್ತಾರೆ. ಮತ್ತು ಒಳಚರಂಡಿ ಹತ್ತಿರವಿರುವ ವಿದ್ಯುತ್ ಕಂಬಗಳನ್ನು ವರ್ಗಾಯಿಸಲು ಸರ್ವಾನುಮತದಿಂದ ತೀರ್ಮಾನಿಸಿದೆ.

**ಕ್ರಮ: ಕಾರ್ಯಪಾಲಕ ಅಭಿಯಂತರರು, (ವಿದ್ಯುತ್ ವಿಭಾಗ)**

2) **ಕಾನೂನು ಸುವ್ಯವಸ್ಥೆ:-**

- ವಾರ್ಡ್‌ನಂ. 40-ದೊಡ್ಡಬಿದರಕಲ್ಲು ವ್ಯಾಪ್ತಿಗೆ ಸಂಬಂಧಿಸಿದಂತೆ, ತಿಗಳರಪಾಳ್ಯ ಮುಖ್ಯರಸ್ತೆಯಿಂದ ಮಂಜುಶ್ರೀ ಗಾರ್ಮೆಂಟ್ಸ್‌ವರೆಗೆ, ಅಂದ್ರಹಳ್ಳಿ ಸರ್ಕಲ್‌ನಿಂದ ಚೇತನ್ ಸರ್ಕಲ್‌ವರೆಗೆ ಹಾಗೂ ಬಾಲಾಜಿನಗರದಲ್ಲಿ ಆಟೋ ಚಾಲಕರಿಂದ ಟ್ರಾಫಿಕ್ ಸಮಸ್ಯೆಗಳಾಗಿರುತ್ತದೆ.
- ಅಂದ್ರಹಳ್ಳಿ ಅರಳಿಕಟ್ಟೆ, ಅಂದ್ರಹಳ್ಳಿ ಮುಖ್ಯರಸ್ತೆ, ತಿಗಳರಪಾಳ್ಯ ಮುಖ್ಯರಸ್ತೆ, ಹಾಗೂ ಇತರೆ ಮುಖ್ಯರಸ್ತೆಗಳಲ್ಲಿ ಪೆಟ್ಟಿ ಅಂಗಡಿ ವ್ಯಾಪಾರಿಗಳು ಬೀದಿ ವ್ಯಾಪಾರಿಗಳು, ಮೀನು ವ್ಯಾಪಾರಿಗಳಿಂದ ಫುಟ್‌ಪಾತ್‌ನಲ್ಲಿಯೇ ವ್ಯಾಪಾರಮಾಡುವುದರಿಂದ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇಂತಹ ವ್ಯಾಪಾರಿಗಳಿಗೆ ಧ್ವನಿವರ್ಧಕದ ಮೂಲಕ ಪ್ರಕಟಣೆ ನೀಡಿ ತೆರವುಗೊಳಿಸಲು ಪೊಲೀಸ್ ಇಲಾಖೆರವರು ಕ್ರಮ ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು,
- ತಿಗಳರಪಾಳ್ಯ, ತಿಪ್ಪೇನಹಳ್ಳಿ, ಚನ್ನನಾಯಕನಪಾಳ್ಯ, ಅಂದ್ರಹಳ್ಳಿ ಹಾಗೂ ಮಂಜುಶ್ರೀ ಬಾರ್. ಹೊಸ ಎಂ.ಆರ್.ಪಿ.ಗಳ ಹತ್ತಿರ ಪುಂಡಪೋಕರಿಗಳು, ಕಳ್ಳರ ಸಂತೆಯು ಹೆಚ್ಚಾಗಿದ್ದು ಸಿ.ಸಿ. ಕ್ಯಾಮರಗಳನ್ನು ಅಳವಡಿಸಿ ಪೊಲೀಸ್ ಗಸ್ತನ್ನು ಹೆಚ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕ್ರಮ: ಆರಕ್ಷಕ ನಿರೀಕ್ಷಕರು, (ಬ್ಯಾಡರಹಳ್ಳಿ/ಪೀಣ್ಯ ಪೊಲೀಸ್ ಠಾಣೆ)**

3) **ಕಾಮಗಾರಿ :-**

- ವಾರ್ಡ್‌ನಂ. 40-ದೊಡ್ಡಬಿದರಕಲ್ಲು ವ್ಯಾಪ್ತಿಗೆ ಸಂಬಂಧಿಸಿದಂತೆ, ಇನ್ನು ಮುಂದೆಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ವಾರ್ಡ್ ಸಮಿತಿ ಸಭೆಯ ಗಮನಕ್ಕೆ ತಂದು ಕಾರ್ಯವನ್ನು ಪ್ರಾರಂಭಿಸಲು ಸೂಚಿಸಿದೆ. ವಾರ್ಡ್‌ನಂ. 40ರ ಸಹಾಯಕ ಅಭಿಯಂತರರಿಗೆ ವಾರ್ಡ್ ಕಾಮಗಾರಿಗಳ ಜೊತೆಗೆ ಘನ ತ್ಯಾಜ್ಯ ನಿರ್ವಹಣೆ, ಬಿಡಬ್ಯು.ಎಸ್.ಎಸ್.ಬಿ. ಕಾಮಗಾರಿ, ಬೃಹತ್ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಒಬ್ಬರೇ ನಿರ್ವಹಿಸುತ್ತಿರುವುದರಿಂದ ವಾರ್ಡ್ ಕಾಮಗಾರಿಗಳು ವಿಳಂಬವಾಗುತ್ತಿರುತ್ತದೆ ಎಂದು ಎಲ್ಲಾ ಸದಸ್ಯರು ಸಮಿತಿಯ ಗಮನಕ್ಕೆ ತರುತ್ತಾ ಹೆಚ್ಚುವರಿ ಕಾರ್ಯದಿಂದ ಕೂಡಲೇ ಬೇರೆಯವರಿಗೆ ನಿಯೋಜಿಸುವಂತೆ ಮೇಲಾಧಿಕಾರಿಗಳಿಗೆ ತಿಳಿಸಲು ಸಮಿತಿಯು ತೀರ್ಮಾನಿಸಿತು.
- ಒಂಟಿ ಮನೆ ನಿರ್ಮಿಸುವ ಕಾರ್ಯಕ್ರಮದಡಿಯಲ್ಲಿ ಅರ್ಜಿ ಸಲ್ಲಿಸಿರುವ ಅರ್ಜಿಗಳನ್ನು ಒಟ್ಟುಗೂಡಿಸಿ ಅರ್ಹರಿಗೆ ಮಾತ್ರ ಆಯ್ಕೆ ಮಾಡಲು ಮುಂದಿನ ಸಭೆಯಲ್ಲಿ ಮಂಡಿಸಲು ಸಮಿತಿಯು ತೀರ್ಮಾನಿಸಿತು.
- ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ ಸದರಿ ವಾರ್ಡ್ ವ್ಯಾಪ್ತಿಯು ವಿಸ್ತಾರವಾಗಿರುವುದರಿಂದ ನಿರ್ವಹಣೆಗಾಗಿ ಮುಂದಿನ ಆಯಾವ್ಯಯದಲ್ಲಿ ಹೆಚ್ಚು ಅನುದಾನ

ನೀಡಲು ಶಿಫಾರಸ್ಸು ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲು ತೀರ್ಮಾನಿಸಲಾಯಿತು. ಅಂದ್ರಹಳ್ಳಿ ಸರ್ಕಾರಿ ಶಾಲೆಯ ಹತ್ತಿರ ಹಾಗೂ ಅಂದ್ರಹಳ್ಳಿ ದಾವಣಗೆರೆ ಬೆಣ್ಣೆ ದೋಸೆ ಹೋಟೆಲ್ ವರೆಗೆ ಮೋರಿಗಳಲ್ಲಿ ಹೂಳನ್ನು ತೆಗೆದು ರಸ್ತೆಗಳಲ್ಲಿ ಹಾಕಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ವಾಹನ ಚಾಲಕರಿಗೆ ರಸ್ತೆಯಲ್ಲಿ ಸಂಚರಿಸಲು ತೊಂದರೆಯಾಗುತ್ತಿದ್ದು, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ವಹಿಸಲು ಕಾಮಗಾರಿ ಇಲಾಖೆಗೆ ಸೂಚಿಸಿದೆ.

- ಕುಡಿಯುವ ನೀರು ನಿರ್ವಹಣೆ ಬಗ್ಗೆ ಇದುವರೆಗೂ ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳದೇ ಈ ವಾರ್ಡಿನ ಸಾರ್ವಜನಿಕರು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿರುವುದಾಗಿ ಇದರಿಂದ ನೀರಿನ ಸಮರ್ಪಕ ಸರಬರಾಜು ವಿಚಾರವಾಗಿ ನೀರು ಸರಬರಾಜುದಾರರ ಹಾವಳಿ ಜಾಸ್ತಿಯಾಗಿರುತ್ತದೆ. ಒಟ್ಟಾರೆಯಾಗಿ ಯಾವುದೇ ನಿರ್ವಾಹಕರು ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ. ಖಾಯಂ ನೀರು ಸರಬರಾಜುದಾರರನ್ನು ಆಂತರಿಕ ಬದಲಾವಣೆ ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ ಹಾಗೂ ನಿರ್ವಾಹಕರನ್ನು ಪ್ರತ್ಯೇಕ ಸಭೆ ಕರೆದು ಸಭೆ ನಡೆಸುವುದು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ತುರ್ತಾಗಿ ಅಗತ್ಯ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.
- ಚನ್ನನಾಯಕನಪಾಳ್ಯದಿಂದ ಮೈಸೂರು ಲ್ಯಾಂಪ್ ಬಡಾವಣೆಗಳಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬೋರ್‌ವೆಲ್‌ಗಳನ್ನು ಹಾಕಿಸಲು ಸೂಚಿಸುತ್ತಾ ಸದರಿ ಸ್ಥಳಕ್ಕೆ ಪೈಪ್‌ಲೈನ್ ಹಾಕಲು ಹಾಗೂ ಪುಲ್‌ಲೈನ್ ಡೆಪ್ತ್ ಬಿಡಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. ಡಿ ಗ್ರೂಪ್ 3ನೇ ಬ್ಲಾಕ್‌ನಲ್ಲಿ ಬೋರ್‌ವೆಲ್ ಕೊರೆದಿದ್ದು, ಸದರಿ ಬೋರ್‌ವೆಲ್‌ನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿರುವುದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಜನವರಿ ತಿಂಗಳಿನಿಂದ ಮೇ ತಿಂಗಳವರೆಗೆ ಬೇಸಿಗೆ ಇರುವುದರಿಂದ ಸಾರ್ವಜನಿಕರಿಗೆ ನೀರಿನ ತೊಂದರೆ ಇರುವುದರಿಂದ ಹೆಚ್ಚುವರಿ ಟ್ಯಾಂಕರ್ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸದಸ್ಯರು ಸೂಚಿಸಿರುತ್ತಾರೆ. ದೊಡ್ಡ ಸಪ್ತಗಿರಿ ಜಾಗದಲ್ಲಿರುವ ಬೋರ್‌ವೆಲ್‌ಗೆ ಮೋಟರ್ ವ್ಯವಸ್ಥೆಯನ್ನು ನೀಡಲು ಸದಸ್ಯರು ಸೂಚಿಸಿರುತ್ತಾರೆ, ಥಾಮಸ್ ಬೋರ್‌ವೆಲ್ ಗುತ್ತಿಗೆದಾರರು ಸರಿಯಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.
- ಹೊಸಹಳ್ಳಿಯ ಪೆಟ್ರೋಲ್ ಮುನಿಯಪ್ಪ ಸರ್ಕಲ್‌ನಿಂದ ಡಿ ಗ್ರೂಪ್ ಬಡಾವಣೆಗೆ ಬ್ರಿಡ್ಜ್ ನಿರ್ಮಾಣವು ಈಗಾಗಲೇ ಪ್ರಾರಂಭಗೊಂಡಿದ್ದು, ಸದರಿ ಕಾಮಗಾರಿಯು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿದ್ದು, ಸದರಿ ಕಾಮಗಾರಿಯನ್ನು ಈ ಕೂಡಲೇ ಪ್ರಾರಂಭಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರರು, (ಹೇರೋಹಳ್ಳಿ ಉಪ ವಲಯ)**

4) ಆರೋಗ್ಯ :-

- ವಾರ್ಡ್‌ನಂ. 40-ದೊಡ್ಡಬಿದರಕಲ್ಲು ವ್ಯಾಪ್ತಿಗೆ ಸಂಬಂಧಿಸಿದಂತೆ, ಸದರಿ ವಿಷಯದಲ್ಲಿ ಚರ್ಚಿಸಲಾಗಿ ದೊಡ್ಡಬಿದ್ಧರಕಲ್ಲು ವಾರ್ಡ್‌ನಲ್ಲಿ ಕಸದ ಆಟೋಗಳು ಸರಿಯಾಗಿ ಎಲ್ಲಾ ರಸ್ತೆಗಳಲ್ಲಿ ಹೋಗಿ ಕಸ ಸಂಗ್ರಹಿಸುತ್ತಿರುವುದಿಲ್ಲ. ಹಾಗೂ ಬೀದಿಯಲ್ಲಿರುವ ಕಸವನ್ನು ಬೆಂಕಿ ಹಚ್ಚಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಬೆಂಕಿ ಹಾಕುವವರಿಗೆ ದಂಡ ವಿಧಿಸಲು

ಸಭೆಯ ಸದಸ್ಯರು ತಿಳಿಸಿದ್ದು, ಆರೋಗ್ಯ ಇಲಾಖೆರವರು ಈ ವಿಷಯವನ್ನು ಗಂಭೀರವೆಂದು ಪರಿಗಣಿಸಿ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಲಾಯಿತು. ಮುಖ್ಯರಸ್ತೆಗಳಲ್ಲಿರುವ ಕಸದ ಡಂಪಿಂಗ್ ಯಾರ್ಡ್‌ಗಳನ್ನು ಅಡ್ಡರಸ್ತೆಗಳಲ್ಲಿ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು

**ಕ್ರಮ: ಆರೋಗ್ಯ ಅಧಿಕಾರಿ, (ಹೇರೋಹಳ್ಳಿ ಉಪ ವಲಯ)**

5) ಕಂದಾಯ :–

- ವಾರ್ಡ್‌ನಂ. 40–ದೊಡ್ಡಬಿದರಕಲ್ಲು ವ್ಯಾಪ್ತಿಗೆ ಸಂಬಂಧಿಸಿದಂತೆ, ಡಿ ಗ್ರೂಪ್ ಬಡಾವಣೆಯು ಬಿಬಿಎಂಪಿಗೆ ಹಸ್ತಾಂತರವಾಗಿರುವ ಪೂರ್ಣ ಮಾಹಿತಿಯನ್ನು (ಪಹಣಿ, ಬಡಾವಣೆ ನಕ್ಷೆ, ಋಣಭಾರ) ನೀಡಲು ಸೂಚಿಸುತ್ತಾ, ಡಿ ಗ್ರೂಪ್ ಬಡಾವಣೆಯಲ್ಲಿ ಪವರ್ ಸ್ಟೇಷನ್‌ಗೆ ಜಾಗ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.
- ವಾರ್ಡ್‌ನಂ. 40–ದೊಡ್ಡಬಿದರಕಲ್ಲು ವ್ಯಾಪ್ತಿಗೆ ಸಂಬಂಧಿಸಿದಂತೆ, ವಸೂಲಾಗಿರುವ ಕಂದಾಯದ ಬಗ್ಗೆ ಚರ್ಚಿಸಲಾಯಿತು. ಮತ್ತು ಕರಿವೋಬನಹಳ್ಳಿ ಗ್ರಾಮದ ಅಸೆಸ್‌ಮೆಂಟ್ ವಹಿಗಳನ್ನು ಮಾನ್ಯ ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರು ತಪಾಸಣೆಗಾಗಿ ಪಡೆದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಸದರಿ ವಹಿಗಳನ್ನು ಈ ಕೂಡಲೇ ಸಹ ಕಂದಾಯ ಅಧಿಕಾರಿ ಕಛೇರಿಗೆ ತರಲು ಸಭೆಯ ಅಧ್ಯಕ್ಷರು ಸೂಚಿಸಿರುತ್ತಾರೆ.

**ಕ್ರಮ: ಸಹ ಕಂದಾಯ ಅಧಿಕಾರಿ, (ಹೇರೋಹಳ್ಳಿ ಉಪ ವಲಯ)**

6) ಕೆರೆ ಮತ್ತು ಉದ್ಯಾನವನ ನಿರ್ವಹಣೆ:–

- ದೊಡ್ಡಬಿದರಕಲ್ಲು ವಾರ್ಡ್ ವ್ಯಾಪಿಯಲ್ಲಿನ ಅಂದ್ರಹಳ್ಳಿ ಮತ್ತು ಲಿಂಗಧೀರನಹಳ್ಳಿಯಲ್ಲಿನ ಕೆರೆ ಅಂಗಳದಲ್ಲಿ ಹಾಗೂ ವಾಕಿಂಗ್ ಟ್ರ್ಯಾಕ್‌ನಲ್ಲಿ ಜಾಸ್ತಿ ಗಿಡಗಳು ಬೆಳೆದಿರುತ್ತವೆ. ಹಾಗೂ ಕರೆ ನೀರು ವಾಸನೆ ಮತ್ತು ಕೆರೆ ಅಂಗಳದಲ್ಲಿ ಸಾರ್ವಜನಿಕರ ಶೌಚಾಲಯ ಕಟ್ಟುತ್ತಿರುವುದನ್ನು ಅರ್ಧಕ್ಕೆ ನಿಲ್ಲಿಸಿರುವುದು ಕಂಡುಬಂದಿರುತ್ತದೆ. ಇದರಿಂದ ಸಾರ್ವಜನಿಕರಿಗೆ ವಾಕಿಂಗ್ ಮಾಡಲು ತುಂಬಾ ತೊಂದರೆಯಾಗುತ್ತಿರುತ್ತದೆ ಹಾಗೂ ತಿಪ್ಪೇನಹಳ್ಳಿ, ಲಿಂಗದೀರನಹಳ್ಳಿ ಕೆರೆಗಳಿಗೆ ಬದಿಗಳನ್ನು ನಿರ್ಮಿಸಲು ತಿಳಿಸುತ್ತಾ, ಕೆರೆ ಮತ್ತು ಉದ್ಯಾನವನ ನಿರ್ವಹಣೆಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಮೇಲ್ಕಂಡ ಸಮಸ್ಯೆಗಳಿಗೆ ಸಮರ್ಪಕವಾಗಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು. ಆದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೆರೆ ನಿರ್ವಹಣೆಗೆ ಸಂಬಂಧಪಟ್ಟ ಅಧಿಕಾರಿ/ನೌಕರರು ಸದರಿ ಸಭೆಗೆ ಗೈರು ಹಾಜರಾಗಿರುವ ಹಿನ್ನೆಲೆಯಲ್ಲಿ ಸದರಿರವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ತೀರ್ಮಾನಿಸಲಾಯಿತು. ಹಾಗೂ ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿದೆ.

- **ಕ್ರಮ: ಕಾರ್ಯಪಾಲಕ ಅಭಿಯಂತರರು, (ಕೆರೆ ಮತ್ತು ಉದ್ಯಾನವನ)**

—

7) ಕಲ್ಯಾಣ ಇಲಾಖೆ:-

- ಬಿಬಿಎಂಪಿಯ ಕಲ್ಯಾಣ ಶಾಖೆಯಿಂದ ಸಾರ್ವಜನಿಕರಿಗೆ ಸಿಗಬೇಕಾಗಿರುವ ಸೌಕರ್ಯಗಳು ಹಾಗೂ ಕಾರ್ಯಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುವುದರಿಂದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿರುವುದಿಲ್ಲ. ಆದ್ದರಿಂದ ಮುಂದಿನ ಸಭೆಗೆ ವರದಿಯೊಂದಿಗೆ ತಪ್ಪದೇ ಹಾಜರಾಗಲು ಸೂಚಿಸಲಾಗಿದ್ದು ಸದರಿರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ತೀರ್ಮಾನಿಸಲಾಯಿತು.

  - ಕ್ರಮ: ಕಲ್ಯಾಣ ಅಧಿಕಾರಿಗಳು, (ರಾ.ರಾ.ನಗರ ವಲಯ)

8) ಬೆಸ್ಕಾಂ ವಿಭಾಗ:-

- ವಾರ್ಡ್‌ನಂ. 40ರ ವ್ಯಾಪ್ತಿಯಲ್ಲಿ ನಿರಂತರವಾಗಿ ವಿದ್ಯುತ್ ನೀಡಲು ಪವರ್ ಸ್ಟೇಷನ್ ನಿರ್ಮಿಸುವ ಅವಶ್ಯಕತೆ ಇದ್ದು, ಇದನ್ನು ನಿರ್ಮಿಸಲು ಒಂದು ಎಕರೆ ಜಾಗದ ಅವಶ್ಯಕತೆ ಬಗ್ಗೆ ಸಮಿತಿಯ ಗಮನಕ್ಕೆ ತಂದರು.

  - ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ)

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು, ವಾರ್ಡ್ ಸಮಿತಿ,
ವಾರ್ಡ್‌ನಂ.40-ದೊಡ್ಡಬಿದರಕಲ್ಲು.

ಪ್ರತಿಗಳು

1. ಕೌನ್ಸಿಲ್ ಕಾರ್ಯದರ್ಶಿಗಳು, ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ, ರವರ ಮಾಹಿತಿಗಾಗಿ.
3. ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ
4. ಕಂದಾಯ ಅಧಿಕಾರಿ ಕೆಂಗೇರಿ ವಿಭಾಗ, ರವರ ಮಾಹಿತಿಗಾಗಿ
5. ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
6. ಆರೋಗ್ಯ ನಿರೀಕ್ಷಕರು ([illegible])
7. [illegible]
8. ಆರೋಗ್ಯ ಅಧಿಕಾರಿ ([illegible])
9. ಕಾರ್ಯಪಾಲಕ ಅಭಿಯಂತರರು (ಕೆರೆ ಮತ್ತು ಉದ್ಯಾನವನ)
10. ಕಲ್ಯಾಣ ಅಧಿಕಾರಿ (ರಾ.ರಾ.ನಗರ ವಲಯ)
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ)
12. [illegible]